ರೈತರ ಆತ್ಮಹತ್ಯೆ – ಪರಿಹಾರ

ಡಾ. ಜಿ.ಕೆ.ವೀರೇಶ್ ವಿಶ್ರಾಂತ ಕುಲಪತಿಗಳು ಕೃ.ವಿ.ವಿ. ಬೆಂಗಳೂರು

ಆತ್ಮಹತ್ಯೆ ಒಂದು ಸಾರ್ವತ್ರಿಕ ಬೆಳವಣಿಗೆ. ಇದು ಯಾವುದೇ ದೇಶ, ಕಾಲ, ಜನಾಂಗ, ವೃತ್ತಿಗೆ ಸೀಮಿತವಾಗಿಲ್ಲ. ಸಾಂಕ್ರಾಮಿಕವಾಗದಿದ್ದರು ಪರಿಸರದ ಮೇಲೆ ಪ್ರಭಾವ ಬೀರಬಹುದು. ಆತ್ಮಹತ್ಯೆಗೆ ಕಾರಣ ಹಲವಾರು ಇರಬಹುದು. ಹೊರನೋಟಕ್ಕೆ ಯಾವುದೇ ಒಂದು ನಿರ್ದಿಷ್ಟ ಕಾರಣಕ್ಕಾಗಿ ಆತ್ಮಹತ್ಯೆ ಮಾಡಿಕೊಂಡ ಪ್ರಕರಣವಾಗಿದ್ದರೂ ಅದರ ಹಿನ್ನೆಲೆಯಲ್ಲಿ ಅಗೋಚರವಾದ ವೈಯಕ್ತಿಕ ಮನೋವ್ಯಾಕುಲದ ಕಾರಣ ಪೀಡಿಸುತ್ತಿರಬಹುದು.

ಮನೋವಿಜ್ಞಾನಿಗಳು ಆತ್ಮಹತ್ಯೆಯ ನಾಲ್ಕು ಹಂತಗಳನ್ನು ಗುರುತಿಸಿದ್ದಾರೆ. ಅವೆಂದರೆ ಸಂದರ್ಭ (ಇವೆಂಟ್ಸ್), ಕಾರ್ಯ (ಅಕಷನ್ಸ್) ಒತ್ತಡ (ಸ್ಟ್ರೆಸ್) ಮತ್ತು ಚಾಕು ಅಥವಾ ಕಿಡಿ (ಟ್ರಿಗರ್ಸ್) (Gururaj and ISSAC 2001) ಉದಾಹರಣೆಗೆ ಒಬ್ಬ ರೈತನ ಮಗ ಸಂತೆಯಲ್ಲಿ ಎತ್ತುಗಳನ್ನು ಮಾರಿಬಂದಾಗ ತಂದೆ ಕಡಿಮೆ ಬೆಲೆಗೆ ಮಾರಿದನೆಂದು ಅವಾಚ್ಯಯಿಂದ ಬೈದನಂತೆ. ತಕ್ಷಣವೇ ಹೋಗಿ ನೇಣು ಹಾಕಿಕೊಂಡು ಸತ್ತ, ಆ ಒಂದು ಘಳಿಗೆಯಲ್ಲಿ ಬೈದದ್ದು ನಿಮಿತ್ತ ಮಾತ್ರ. ಹಿನ್ನೆಲೆಯಲ್ಲಿ ಅವನು ಆಗಾಗ ಸಣ್ಣ ಪುಟ್ಟ ತಪ್ಪುಗಳಿಗೆ ಮಗನನ್ನು ಬೈಯುತ್ತಿದ್ದು ಅವನ ಮನಸ್ಸಿನಲ್ಲಿ ಕಾಡುತ್ತಿತ್ತು. ಅಂದು ನಾಲ್ಕಾರು ಜನರು ಎದುರಿಗೆ ಬೈದದ್ದು ಅವಹೇಳನವಾದಂತಾಯಿತು. ಕ್ಷಣ ಮಾತ್ರದ ಮನಸ್ಸಿನ ಪರಿವರ್ತನೆ (ಟ್ರಿಗರ್) ಆತ್ಮಹತ್ಯೆಯಲ್ಲಿ ಕೊನೆಗೊಂಡಿತು. ಎಲ್ಲಾ ಆತ್ಮಹತ್ಯೆಗಳಲ್ಲಿ ಈ ನಾಲ್ಕು ಹಂತಗಳನ್ನು ಗುರುತಿಸಬಹುದು.

ಜಗತ್ತಿನಲ್ಲಿ ಪ್ರತಿ ಸೆಕೆಂಡಿಗೆ ಒಬ್ಬರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಭಾರತದಲ್ಲಿ ಪ್ರತಿ ವರ್ಷ ಒಂದು ಲಕ್ಷ ಇಪ್ಪತ್ತು ಸಾವಿರ ಜನರು ಆತ್ಮಹತ್ಯೆ ಮಾಡಿಕೊಂಡರೆ ನಗರಗಳಲ್ಲಿ ಬೆಂಗಳೂರು ಮತ್ತು ರಾಜ್ಯಗಳಲ್ಲಿ ಕೇರಳದಲ್ಲಿ ಅತ್ಯಧಿಕ ಆತ್ಮಹತ್ಯೆ ಸಾವು ಸಂಭವಿಸುತ್ತಿದೆ. ದೇಶದಲ್ಲಿ ಲಕ್ಷಕ್ಕೆ ಹನ್ನೊಂದು ಜನವಾದರೆ ಬೆಂಗಳೂರಿನಲ್ಲಿ ೩೫ ಜನ, ಕೇರಳದಲ್ಲಿ ೧೪ ಜನ ಸಾವನ್ನಪ್ಪುತ್ತಿದ್ದಾರೆ(ಡಾ ಸಿ.ಆರ್. ಚಂದ್ರಶೇಖರ್ – ಸಮಸ್ಯೆಗೆ ಆತ್ಮಹತ್ಯೆ ಪರಿಹಾರವಲ್ಲ 'ಅಂತರಾಳ' ಪ್ರಜಾವಾಣಿ ವಿಶೇಷ, ೨೧ನೇ ಜೂನ್ ೨೦೦೮).

ಆತ್ಮಹತ್ಯೆಗೆ ಮುಖ್ಯ ನಾಲ್ಕು ಕಾರಣಗಳನ್ನು ಗುರುತಿಸಿದ್ದಾರೆ

೧. ಸಾವೇ ಸಮಸ್ಯೆಗೆ ಪರಿಹಾರವೆಂಬ ತರ್ಕ: ನಿಭಾಯಿಸಲಾಗದ ಕಷ್ಟ, ನಷ್ಟ, ಸೋಲು, ನಿರಾಶೆ, ಅಪಮಾನ, ಹಣ, ಪ್ರೀತಿ, ಸ್ಥಾನಮಾನದ ಕೊರತೆಯಿಂದ ಕೆಲವರು ಕೆಲೆವೇ ಸೆಕೆಂಡುಗಳಲ್ಲಿ ಈ ನಿರ್ದಾರಕ್ಕೆ ಬಂದರೆ ಮತ್ತೆ ಕೆಲವರು ಹಲವಾರು ದಿನಗಳು ವಾರಗಳ ಕಾಲ ಅಳೆದು ಸುರಿದು ನಿರ್ದಾರ ಮಾಡುತ್ತಾರೆ.

೨. ಒತ್ತಡ ತರಲು: ಪ್ರತಿಭಟನೆ ಮಾಡಲು ಸಂಭಂದಪಟ್ಟವರ ಗಮನ ಸೆಳೆಯಲು ಕೆಲವರು ಆತ್ಮಹತ್ಯೆ ಮಾರ್ಗ ಅನುಸರಿಸುತ್ತಾರೆ..

೩. ಸಹಾಯ ಸಹಾನುಭೂತಿಗಾಗಿ ಆಸರೆ ಯಾಚಿಸಿ ಆತ್ಮಹತ್ಯೆಗೆ ಪ್ರಯತ್ನಿಸುತ್ತಾರೆ.

೪. ಮಾನಸಿಕ ಅಸ್ವಸ್ಥೆಗಳಿಂದ: ಆತ್ಮಹತ್ಯೆ ಮಾಡಿಕೋಳ್ಳುವವರಲ್ಲಿ ಶೇಕಡ ಅರವತ್ತರಷ್ಟು ಜನ ಖಿನ್ನತೆ ಕಾಯಿಲೆಯಿಂದ ಅಥವಾ ಮಿದುಳಿನಲ್ಲಿ ಡೋಪಮಿನ್ ಕಡಿಮೆಯಾಗಿ ಇರಬಹುದು.

ಆತ್ಮಹತ್ಯೆಗಳು ಅನಾಧಿಕಾಲದಿಂದಲೂ ಆಗುತ್ತಿದ್ದರೂ ಅವುಗಳ ವೈಜ್ಞಾನಿಕ ವಿಶ್ಲೇಷಣೆ ೨೦ ನೇ ಶತಮಾನದಲ್ಲಿ ಅಲ್ಲಲ್ಲಿ ನಡೆಯಿತು. ಅದರಲ್ಲೂ ರೈತರ ಆತ್ಮಹತ್ಯೆಯ ಬಗ್ಗೆ ಅಧ್ಯಯನ ಇತ್ತೀಚಿನದೆಂದು ಹೇಳಬಹುದು. ಅಮೇರಿಕೆಯಲ್ಲಿ ೧೯೭೭-೯೦ ರ ಅವಧಿಯಲ್ಲಿ ಆದ ಸುಮಾರು ೫೨೬ ಪ್ರಕರಣಗಳಲ್ಲಿ ರೈತರು, ಗೇಣಿದಾರರು, ಮ್ಯಾನೇಜರನ್ನು ಒಳಗೊಂಡಂತೆ ೮೪ ಪ್ರಕರಣಗಳನ್ನು ವಿಶ್ಲೇಷಣೆ ಮಾಡಿದ್ದರಲ್ಲಿ ಹಣಕಾಸು ವ್ಯಹಹಾರ, ಕೌಟುಂಬಿಕ ಕಲಹ ಹಾಗು ಬುದ್ದಿ ದೋಷಗಳು ಮುಖ್ಯ ಕಾರಣಗಳೆಂದು ತಿಳಿದಿದೆ. (Kelly et al 1999). ಇಂಗ್ಲೇಡಿನಲ್ಲೂ ರೈತರ ಆತ್ಮಹತ್ಯೆಗೆ ಹಣಕಾಸು ತೊಂದರೆ ಹಾಗೂ ಸಮಾಜದಲ್ಲಿ ಅವರನ್ನು ಕೀಳುಮಟ್ಟದಲ್ಲಿ ನೋಡುತ್ತಿದ್ದದ್ದು ಕಾರಣವೆಂದು ಹೇಳಿದೆ (As long et al 1999). ಅಮೆರಿಕೆಯಲ್ಲಿ ೧೯೮೦ ರ ದಶಕದಲ್ಲಿ ಕೃಷಿ ಅಪತ್ ಕಾಲದಲ್ಲಿದ್ದಾಗ ರೈತರಲ್ಲಿ ಹತಾಷೆ ಮೂಡಿದ್ದು ಅವರ ಆತ್ಮಹತ್ಯೆಗೆ ಕಾರಣವೆಂದು ಹೇಳಿದೆ (Gunderson et al 1993).

ಇಸ್ಲಾಂನಲ್ಲಿ ಆತ್ಮಹತ್ಯೆಯನ್ನು ಖಂಡಿಸಿದ್ದರೂ, ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಮಲೇಷ್ಯಾಗಳಲ್ಲಿ ರೈತರ ಆತ್ಮಹತ್ಯೆಯನ್ನು ಕಾಣಬಹುದು(Javeed 1996). ಇದರಲ್ಲಿ ಹೆಚ್ಚಿನ ಸಂಖ್ಯೆ ಮಧ್ಯಮ ವಯಸ್ಸಿನವರು ಮತ್ತು ಮದುವೆಯಾದ ಹೆಂಗಸರು (Khan and Reza 1998).

ಕಳೆದ ಶತಮಾನದ ಉತ್ತರಾರ್ದದಲ್ಲಿ ಶ್ರೀಲಂಕಾದಲ್ಲಿ ಆತ್ಮಹತ್ಯೆ ಒಂದು ಪಿಡುಗಾಗಿ ಪರಿಣಮಿಸಿತ್ತು. ಒಂದು ಲಕ್ಷ ಜನಕ್ಕೆ ಸರಾಸರಿ ೧೮ ರಂತೆ ೧೯೭೧ ರಲ್ಲಿ ಇದ್ದದ್ದು ೧೯೯೬ ರ ವೇಳೆಗೆ ಲಕ್ಷಕ್ಕೆ ೪೦ ಕ್ಕೆ ಮೀರಿ ಆತ್ಮಹತ್ಯೆ ಮಾಡಿಕೊಂಡಿದ್ದು ಗಮನಕ್ಕೆ ಬಂದಿದೆ. ಶ್ರೀಲಂಕ ಸರ್ಕಾರ ನೇಮಿಸಿದ್ದ ಪ್ರಸಿಡೆನ್ಸಿಯಲ್ ಟಾಸ್ಕ ಪೋರ್ಸ್ರ ಪ್ರಕಾರ ಅದರಲ್ಲಿ ೧೯೭೦ ಕಟ್ಟಿದ ಅಣೆಕಟ್ಟೆಯಿಂದ ಖುಷ್ಕಿ ಬೇಸಾಯದಿಂದ ನೀರಾವರಿಗೆ ಪರಿವರ್ತನೆಯಾದವರಲ್ಲಿ ಹೆಚ್ಚಿನ ಸಂಖ್ಯೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ (Eddloston et al 1998). ಬಹುಶಃ ಹೆಚ್ಚಿನ ಬಂಡವಾಳ ತೊಡಗಿಸಿ ಕಷ್ಟಕ್ಕೆ ಸಿಕ್ಕಿರುವುದು ಮುಖ್ಯ ಕಾರಣವಿರಬಹುದು.

ಚೈನಾದಲ್ಲೂ ಕೂಡ ರೈತರು ಆತ್ಮಹತ್ಯೆಗೆ ಶರಣುಹೋಗಿದ್ದಾರೆ ಅವರಲ್ಲಿ ಹೆಚ್ಚಿನವರು ಕಿರುವಯಸ್ಸಿನ ಹೆಂಗಸರು (Cheng and Mann 1995) ಮಲೇಷ್ಯಾದಲ್ಲಿ ಆತ್ಮಹತ್ಯೆ ಮಾಡುಕೊಳ್ಳುವವರಲ್ಲಿ ಭಾರತೀಯ ಮೂಲದವರೇ ಹೆಚ್ಚು ಅದರಲ್ಲೂ ದಕ್ಷಿಣ ಭಾರತೀಯರು (Habil 1992).

ಭಾರತದಲ್ಲಿ ಗ್ರಾಮೀಣ ಭಾಗದ ಜನರು ಆತ್ಮಹತ್ಯೆಯನ್ನು ಎರಡು ಕಾರಣಗಳಿಗಾಗಿ ಗೌಪ್ಯದಲ್ಲಿ ಇಡುತ್ತಿದ್ದರು. ಒಂದನೇಯದು ಈ ದೇಶದ ಕಾನೂನು ಪ್ರಕಾರ ಆತ್ಮಹತ್ಯೆ ಕ್ರಿಮಿನಲ್ ಅಪರಾಧ. ಪೋಲಿಸಿನವರ ತನಿಖೆಯ ಕಿರಿಕಿರಿ ಮೃತ ದೇಹಕ್ಕೆ ಮರಣೋತ್ತರ ಪರೀಕ್ಷೆ ಆಗದಂತೆ ನೋಡಿಕೊಳ್ಳಲ್ಲು ಆತ್ಮಹತ್ಯೆಯನ್ನು ಮುಚ್ಚಿಡಲು ಪ್ರಯತ್ನಿಸುತ್ತಾರೆ. ಎರಡನೇಯದು ಆತ್ಮಹತ್ಯೆ ಕುಟುಂಬದ ಕಳಂಕ. ಅಂತಹ ಕುಟುಂಬಕ್ಕೆ ಸಮಾಜದಲ್ಲಿ ಮಾನ್ಯತೆ ದೊರೆಯುವುದು ಕಡಿಮೆ. ಸಂಬಂಧ ಬೆಳೆಸುವವರು ಹಿಂಜರಿಯುತ್ತಾರೆ. ಈ ಕಾರಣಗಳಿಗಾಗಿ ಇಂದಿಗೂ ಸರ್ಕಾರದ ಕ್ರೈಂ ಬ್ರಾಂಚ್ ರೆಕಾರ್ಡುಗಳಿಗೆ ಪೂರ್ಣ ಪ್ರಮಾಣದ ಮಾಹಿತಿ ದೊರೆಯುವುದಿಲ್ಲ. ವಾಸ್ತವವಾಗಿ ಭಾರತದಲ್ಲಿ ಲಕ್ಷಕ್ಕೆ ೯೫ ಮಂದಿ ಆತ್ಮಹತ್ಯೆ

ಮಾಡಿಕೊಳ್ಳುತ್ತಾರೆ ಆದರೆ ಪೋಲಿಸ್ ದಾಖಲೆಗೆ ಬರುವುದು ಸರಾಸರಿ ಲಕ್ಷಕ್ಕೆ ೧೧ ಜನ. ಜಾಗತಿಕ ಮಟ್ಟದಲ್ಲಿ ಲಕ್ಷಕ್ಕೆ ೧೪.೬ ಮಂದಿ ಆತ್ಮಹತ್ಯೆ ಮಾಡಿಒಕೊಳ್ಳುತ್ತಾರೆ.

ಈ ದೇಶದಲ್ಲಿ ರೈತರ ಆತ್ಮಹತ್ಯೆಯ ಪ್ರಕರಣಗಳು ಹೆಚ್ಚಾಗಿ ಬೆಳಕಿಗೆ ಬಂದದ್ದು ಕಳೆದ ಶತಮಾನದ ೮೦-೯೦ ರ ದಶಕದಲ್ಲಿ ಅದರಲ್ಲೂ ಹಸಿರು ಕ್ರಾಂತಿಯ ಬಲೆಗೆ ಬಿದ್ದವರಲ್ಲಿ ಹೆಚ್ಚು. ಇದೇ ಸಮಯದಲ್ಲಿ ಮಾಧ್ಯಮಗಳ ಸಂಖ್ಯೆಯು ಹೆಚ್ಚಾದವು. ಟಿವಿ ಚಾನಲ್‌ಗಳು ಹಳ್ಳಿ ಹಳ್ಳಿಗೂ ತಲುಪುವಂತಾದವು. ಪ್ರಚಾರಕ್ಕಾಗಿ ಇವುಗಳು ರೈತರ ಆತ್ಮಹತ್ಯೆಗಳನ್ನು ಭಾವೋದ್ವೇಕ ಗೊಳಿಸಿದವು. ವೃತ್ತ ಪತ್ರಿಕೆಗಳು ಮುಖಪುಟದಲ್ಲಿ ಅಚ್ಚಾಕಿಸಿದವು. ರಾಗಕೀಯ ಪಕ್ಷಗಳು ಇದರ ಲಾಭವನ್ನು ಪಡೆಯಲ್ಲಿ ಅಲ್ಲಲ್ಲಿ ಅಂತಹ ಕುಟುಂಬಗಳೀಗೆ ಸಾಂತ್ವಾನ ಹೇಳಿ ಧನಸಹಾಯ ನೀಡಿದುದಲ್ಲದೆ ಸರ್ಕಾರವನ್ನು ಆತ್ಮಹತ್ಯೆಮಾಡಿಕೊಂಡ ಕುಟುಂಬಗಳಿಗೆ ಧನಸಹಾಯವನ್ನು ಮಾಡುವಂತೆ ಒತ್ತಾಯಿಸಿದವು. ವಿಪರ್ಯಾಸವೆಂದರೆ ಆತ್ಮಹತ್ಯೆ ಐ.ಪಿ.ಸಿ. ಸೆಕ್ಷನ್ ೩೦೯ ಕಾನೂನುಬಾಹಿರ, ಶಿಕ್ಷಾರ್ಹ. ಆ ಕಾನೂನಿನಿಂದ ಇಲ್ಲಿಯತನಕ ಆತ್ಮಹತ್ಯೆಗಳನ್ನು ತಡೆಗಟ್ಟಲಾಗಿಲ್ಲ. ಬದಲಾಗಿ ಇದೋಂದು ಆಡಚಣೆಯಾಗಿ ಪರಿಣಮಿಸಿದೆ. ಆದ್ದರಿಂದ ಈ ಕಾನೂನನ್ನು ತೆಗೆಯುವುದೇ ಸೂಕ್ತವೆಂದು ತೋರುತ್ತದೆ. ಪರೋಕ್ಷವಾಗಿ ಧನಸಹಾಯ ಇದನ್ನು ಪ್ರೋತ್ಸಾಹಿಸಿದಂತಾಗುತ್ತದೆ. ಬಡತನ ಆತ್ಮಹತ್ಯೆಗೆ ಮೂಲಕಾರಣವಲ್ಲವೆಂದು ಅಧ್ಯಯನಗಳಿಂದ ತಿಳಿದುಬಂದಿದೆ. "ಧನಸಹಾಯವನ್ನು ರೈತರ ಸಮುದಾಯಕ್ಕೆ ತಿಳಿಯಪಡಿಸಿದಾಗ ಅಂತಹ ಪ್ರಕರಣಗಳು ಮತ್ತಷ್ಟು ಹೆಚ್ಚಿ ದುಷ್ಪರಿಣಾಮಗಳು ಆಗುತ್ತವೆ. ಆದುದರಿಂದ ಅಂತಹ ಸಂಪ್ರದಾಯಗಳನ್ನು ಮೊದಲು ಕೈಬಿಡಬೇಕು" ಎಂದು ಕರ್ನಾಟಕ ಸರ್ಕಾರ ರಚಿಸಿದ್ದ ಜಂಟಿ ಸದನ ಸಮಿತಿ ತನ್ನ ವರದಿಯಲ್ಲಿ ಎಚ್ಚರಿಸಿದೆ (೫೬ ನೇ ಶಿಫಾರಸ್ಸು ೯ ನೇ ಮಾರ್ಚ್ ೧೯೯೯ ರಂದು ಸಲ್ಲಿಸಿದ ಅಂತಿಮ ವರದಿ).

ಕರ್ನಾಟಕದಲ್ಲಿ ರೈತರ ಆತ್ಮಹತ್ಯೆ ಪ್ರಕರಣ ಮೊದಲು ಮಾಧ್ಯಮದಲ್ಲಿ ಪ್ರಕಟವಾದದ್ದು ಡಿಸೆಂಬರ್ ೧೨ ೧೯೯೭ ರಲ್ಲಿ, ಬೀದರ್ ಜಿಲ್ಲೆಯ ಸಿದ್ದೇಶ್ವರ ಹಳ್ಳಿಯ ಶಿವರಾಜ ಮೈನಲ್ಲೆಯವರ ಪ್ರಕರಣ (Assadi 1998). ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬದವರಿಗೆ ಸರ್ಕಾರ ಧನಸಹಾಯ ನೀಡಬೇಕೆಂದು ಸದನದ ಸದಸ್ಯರೊಬ್ಬರು ಶಿಫಾರಸ್ಸು ಮಾಡಿದ ಮೇಲೆ ಇಂತಹ ಹಲವಾರು ಪ್ರಕರಣಗಳು ಬೀದರ್ ಜಿಲ್ಲೆಯಲ್ಲಿ ಅಲ್ಲದೆ ಉತ್ತರ ಕರ್ನಾಟಕದ ಬೇರೆ ಜಿಲ್ಲೆಗೆಳಿಂದಲೂ

ಪ್ರಕಟವಾದವು (Shetty 1999, Vasavi 1999). ಪಂಜಾಬ್ ಮತ್ತು ಆಂದ್ರಪ್ರದೇಶಗಳಿಂದಲೂ ರೈತರ ಆತ್ಮಹತ್ಯೆಯ ಬಗ್ಗೆ ಅಧ್ಯಯನ ಮಾಡಿದ ವರದಿಗಳಿವೆ.

ದಿ. ಇನ್ಸಿಟ್ಯೂಟ್ ಫಾರ್ ಡೆವಲಪ್ ಮೆಂಟ್ ಅಂಡ್ ಕಮ್ಯೂನಿಕೇಷನ್, ಚಾಂದಿಗಡ್ ಪಂಜಾಬ್ ಮಾಡಿದ ಅಧ್ಯಯನದಲ್ಲಿ ಪಂಜಾಬಿನ ಗ್ರಾಮಾಂತರ ಪ್ರದೇಶದಲ್ಲಿ ಆದ ಆತ್ಮಹತ್ಯೆಗೆ ಹಲವಾರು ಕಾರಣಗಳಿದ್ದರು ಮುಖ್ಯವಾಗಿ ಸಂಸಾರದ ಬಿಕ್ಕಟ್ಟು, ಸಾಲದ ಭಾದೆ, ಮಧ್ಯ ಸೇವನೆ ಮುಖ್ಯವಾದವೆಂದು ತಿಳಿಸಿದೆ (Institute for Development and Communication 1998).

ಆಂದ್ರಪ್ರದೇಶದಲ್ಲಿ ಆದ ರೈತರ ಆತ್ಮಹತ್ಯೆಯ ಬಗ್ಗೆ ಅವೇರ್ ಸಂಸ್ಥೆ (AWARE) ಮಾಡಿದ ಅಧ್ಯಯನ ಪ್ರಕಾರ ಸುಮಾರು ೩೦೭ ಪ್ರಕರಣಗಳಲ್ಲಿ ೨೫೦ ಪ್ರಕರಣಗಳು ತೆಲಂಗಾಣ ಪ್ರದೇಶದವಾಗಿದ್ದು ಇವರಲ್ಲಿ ಶೆಕಡ ೮೯ ~~ಟ್ಯೂಪಾತೂ~~ ಹತ್ತಿ ಬೆಳೆಗಾರರೆ. ಇವರ ಆತ್ಮಹತ್ಯೆಗೆ ಮುಖ್ಯ ಕಾರಣ ಸಸ್ಯಸಂರಕ್ಷಣೆ ಪರಿಕರಗಳು ಕಳಪೆ ಮಟ್ಟದ್ದವಾಗಿದ್ದರಿಂದ ರೋಗ ಮತ್ತು ಕೀಟ ಭಾದೆ ನಿಯಂತ್ರಣಕ್ಕೆ ಬಾರದೆ ಹತ್ತಿ ಬೆಳೆ ಹಾನಿಯಾಗಿ ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಹೇಳಿದೆ (Madhavan et al 1998).

ಕರ್ನಾಟಕದಲ್ಲಿ ೧೯೯೭-೯೮. ನೇ ಸಾಲಿನಲ್ಲಿ ವರದಿಯಾದ ರೈತರ ಆತ್ಮಹತ್ಯೆ ಪ್ರಕರಣಗಳು ಸದನದಲ್ಲಿ ಗೊಂದಲ ಎಬ್ಬಿಸಿದವು , ಕಾರಣ ಕಂಡುಕೊಳ್ಳಲು ಹಾಗೂ ಪರಿಹಾರ ಸೂಚಿಸಲು ವಿಧಾನಸಭೆಯ ಮಾನ್ಯ ಸಭಾಧ್ಯಕ್ಷರು ೨೮-೦೩-೯೮ ರಂದು ವಿಧಾನಸಭೆಯ ಸದಸ್ಯರಾದ ಜಿ.ಬಿ.ಶಿವಕುಮಾರವರ ಅಧ್ಯಕ್ಷತೆಯಲ್ಲಿ ವಿಧಾನಸಭೆಯ ೧೫ ಸದಸ್ಯರು ಮತ್ತು ವಿಧಾನಪರಿಷತ್ತಿನ ೫ ಜನ ಸದಸ್ಯರನ್ನೊಳಗೊಂಡ ಜಂಟಿ ಸದನ ಸಮಿತಿಯನ್ನು ರಚಿಸಿದರು. ಸಮಿತಿಯ ಪರಿಶಿಲನೆಗಾಗಿ ೫ ಪರಿಶೀಲನಾಂಶಗಳನ್ನು ವಹಿಸಲಾಯಿತು. (೧) ಬೆಳೆ ಹಾನಿಯಿಂದ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದರೆ ಆರ್ಥಿಕ ಸಹಾಯ ಒದಗಿಸುವ ಬಗ್ಗೆ. (೨) ಬೆಳೆಪರಿಹಾರ ನೀಡುವ ಬಗ್ಗೆ. (೩) ಕಳಪೆ ಪರಿಕರಗಳನ್ನು ಒದಗಿಸಿದ ಕಂಪನಿಗಳ ವಿರುದ್ಧ ತೆಗೆದು ಕೊಳ್ಳಬೇಕಾದ ಕ್ರಮಗಳು (೪) ರಾಜ್ಯದ ಎಲ್ಲಾ ವರ್ಗದ

ರೈತರಿಗೆ ಬೆಳೆವಿಮೆ ಜಾರಿಗೆ ತರುವ ಬಗ್ಗೆ. (೫) ಸರ್ಕಾರದ ವತಿಯಿಂದ ತೆಗೆದುಕೊಳ್ಳಬೇಕಾದ ದೀರ್ಘಾವಧಿಯ ಶಾಶ್ವತ ಪರಿಹಾರೋಪಾಯಗಳನ್ನು ಸೂಚಿಸುವ ಬಗ್ಗೆ.

ಸಮಿತಿಯು ೧೯೯೯ ಮಾರ್ಚ್‌ನಲ್ಲಿ ಸಲ್ಲಿಸಿದ ಅಂತಿಮ ವರದಿಯಲ್ಲಿ ೫೬ ಶಿಪ್ಪಾರಸ್ಸುಗಳು ಒಳಗೊಂಡಿವೆ. ಸಮಿತಿಯ ಗಮನಕ್ಕೆ ತಂದಿದ್ದ ೬೦ ಆತ್ಮಹತ್ಯೆಯ ಪ್ರಕರಣಗಳಲ್ಲಿ ಒಂದನ್ನು ಹೊರತುಪಡಿಸಿ ಉಳಿದವೆಲ್ಲ ಬೆಳೆ ಹಾನಿಯಿಂದ ಆತ್ಮಹತ್ಯೆ ಮಾಡಿಕೊಂಡಿಲ್ಲವೆಂದು ಅಭಿಪ್ರಾಯಕ್ಕೆ ಬಂದಿದೆ. ಮುಂದುವರಿದು ಸಮಿತಿಯು ಇಂತಹ ಪ್ರಕರಣಗಳನ್ನು ಕೋಲಕುಷವಾಗಿ ಅಧ್ಯಯನ ಮಾಡಲು ಒಂದು ವೈಜ್ಞಾನಿಕ ಸಮಿತಿಯನ್ನು ರಚಿಸಬೇಕೆಂದು ಶಿಪ್ಪಾರಸ್ಸು ಮಾಡಿತ್ತು. ಈ ಶಿಪ್ಪಾರಸ್ಸಿನ ಮೇರೆಗೆ ಆಗಸ್ಟ ೨೦೦೧ ರಲ್ಲಿ ತಜ್ಞರನ್ನೊಳಗೊಂಡ ಒಂದು ಸಮಿತಿಯನ್ನು ಡಾ. ಜಿ.ಕೆ.ವೀರೇಶ್ ರವರ ನೇತೃತ್ವದಲ್ಲಿ ರಚಿಸಲಾಯಿತು. ಈ ಸಮಿತಿಯಲ್ಲಿ ಆರ್ಥಿಕ ವಿಜ್ಞಾನಿ ಡಾ. ಆರ್. ಎಸ್. ದೇಶಪಾಂಡೆ, ಮನೋವಿಜ್ಞಾನಿ ಡಾ. ಮೋಹನ್.ಕೆ. ಐಸಾಕ್, ವಿಜ್ಞಾನಿ ಡಾ.ಪಿ.ಕೆ.ಶೆಟ್ಟಿ ಮತ್ತು ಐ.ಜಿ.ಪಿ. ಜಿ.ವಿ. ಗೋವನ್ ಕರ್ ಇದ್ದರು. ಡಾ. ಎಸ್.ವಿ. ರೆಡ್ಡಿ ಅಪರ ನಿರ್ದೇಶಕರು ಕೃಷಿ ಇಲಾಖೆ ಈ ಸಮಿತಿಯ ಕಾರ್ಯ ನಿರ್ವಾಹಕರಾಗಿದ್ದರು. ಬಹುಶಃ ಭಾರತದಲ್ಲಿ ರೈತರ ಆತ್ಮಹತ್ಯೆಯ ಬಗ್ಗೆ ಮಾಡಿರುವ ಅಧ್ಯಯನಗಳಲೆಲ್ಲ ವೈಜ್ಞಾನಿಕವಾಗಿ ಮಾಡಿರುವುದು ಇಷ್ಟರತನಕ ಇದೊಂದೆ ಎಂದು ಹೇಳಿದರೆ ತಪ್ಪಾಗಲಾರದು (Veeresh.G.K. 2002)

ಸಮಿತಿಗೆ ವಹಿಸಿದ್ದ ೧೫೬ ರೈತರ ಆತ್ಮಹತ್ಯೆಯ ಪ್ರಕರಣಗಳನ್ನು ಕೂಲಂಕುಷವಾಗಿ ಪರಿಶೀಲಿಸಿರುವುದರೊಂದಿಗೆ ಸಮಿತಿಗೆ ನೇರವಾಗಿ ಬಂದ ಮಾಹಿತಿಗಳನ್ನು ಗಣನೆಗೆ ತಂದು ವಿಶ್ಲೇಷಿಸಿದಾಗ ೭ ಕಾರಣಗಳಲ್ಲಿ ಆತ್ಮಹತ್ಯೆಗೆ ಅರ್ಥಿಕ ಮತ್ತು ಸಾಮಾಜಿಕ ಕಾರಣ ಮುಖ್ಯವಾಗಿ ಕಂಡು ಬಂದವು. ಸಾಲದ ಭಾದೆ ಮತ್ತು ಮಧ್ಯಪಾನ ಸಮವಾದ ಕಾರಣಗಳಾಗಿದ್ದು ಕೌಟುಂಬಿಕ ಸಮಸ್ಯೆಗಳು ಕಾರಣಗಳಾಗಿದ್ದವು. ಬೆಳೆ ಹಾನಿಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದು ಕನಿಷ್ಟ.

ಸಮಿತಿಗೆ ವಹಿಸಿದ್ದ ೩ ಜವಾಬ್ದಾರಿಗಳಲ್ಲಿ (Terms of Reference) (೧) ಆತ್ಮಹತ್ಯೆಗೆ ಕಾರಣ ಆರ್ಥಿಕ, ಸಾಮಾಜಿಕ ಅಥವಾ ಇತರೆ ಮೂಲಗಳೆ? (೨) ರೈತರಲ್ಲಿ ಸ್ವಾಭಿಮಾನ ಸ್ವಾವಲಂಭನೆ

ಮೂಡಿಸಲು ಬೇಕಾದ ಕ್ರಮಗಳನ್ನು ಗುರುತಿಸುವುದು. (೩) ಇಲ್ಲಿಯವರೆಗೆ ರಚಿಸಿರುವ ಸಮಿತಿಯ ಶಿಫ್ಘಾರಸ್ಸುಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಸರ್ಕಾರದ ಪಾತ್ರ.

ಈ ಅಧ್ಯಯನದ ಬಾಗಷಹಃ ರಿಪೋರ್ಟನ್ನು ಪ್ರಕಟಿಸಲಾಗಿದೆ (Deshpande,R.S. 2002)

ರೈತರ ಹಿತದೃಷ್ಟಿಯಿಂದ ಮೇಲೆ ಹೇಳಿದ ಮೂರು ಟರ್ಮ್ಸ್ ಅಪ್ ರೆಫರೆನ್ಸ್ ಅಲ್ಲದೆ ಮುಂದೆ ಹೋಗಿ ರೈತರ ಹತಾಷೆಗೆ ಮತ್ತು ವ್ಯವಸಾಯದ ಹಿನ್ನಡೆಗೆ ಕಾರಣಗಳೇನಿರಬಹುದೆಂದು ರಾಜ್ಯಾದ್ಯಂತ ಸುಮಾರು ಹತ್ತು ಸಾವಿರ ರೈತರಿಂದ ಮಾಹಿತಿ ಸಂಗ್ರಹಿಸಿ ಅವುಗಳನ್ನು ಸಮಿತಿಯು ಕಂಡ ಮಾಹಿತಿಗಳೊಂದಿಗೆ ತುಲನ ಮಾಡಿ ನೋಡಿದಾಗ ರೈತರ ಸಂಕಷ್ಟಗಳಿಗೆ ಮೂಲಭೂತವಾಗಿ ಕೃಷಿಯಿಂದ ವರಮಾನ ದಿನೇ ದಿನೇ ಕುಗ್ಗುತ್ತಾ ಬಂದು ಹೆಚ್ಚು ಹೆಚ್ಚು ರೈತರು ಸಾಲದ ಸಂಕಲೆಯಲ್ಲಿ ಸಿಕ್ಕಿ ಹತಾಶರಾಗುತ್ತಿದ್ದದ್ದು ಕಂಡು ಬಂತು. ರೈತರಲ್ಲಿ ಸ್ವಾವಲಂಭನೆ ಮತ್ತು ಸ್ವಾಭಿಮಾನ ವೃದ್ದಿಸಿಬೇಕಾದರೆ ಕೆಲವು ಮೂಲಭೂತ ಬದಲಾವಣೆಗಳು ಅಗತ್ಯವೆಂದು ತೋರಿತು ಅದಕ್ಕೆ ಈ ಸಮಿತಿ ಮಾಡಿರುವ ೨೬ ಶಿಫ್ಘಾರಸ್ಸುಗಳು ಹಾಗೂ ಜಂಟಿ ಸದನ ಸಮಿತಿ ಮಾಡಿರುವ ೫೬ ಶಿಫ್ಘಾರಸ್ಸುಗಳಲ್ಲಿ ಕೆಲವನ್ನಾದರು ಕಾರ್ಯರೂಪಕ್ಕೆ ತಂದರೆ ರೈತರ ದಿಕ್ಕನ್ನು ಬದಲಿಸಲು ಸಹಾಯವಾಗುವವು. ಸರ್ಕಾರ ಈಗಾಗಲೇ ಹಲವನ್ನು ಅನುಷ್ಠಾನಗೊಳಿಸಿದೆ, ಅವುಗಳಲ್ಲಿ ಮುಖ್ಯವಾಗಿ ಸಾವಯವ ಕೃಷಿಯತ್ತ ರೈತರ ಮನವೊಲಿಸುವ ಕಾರ್ಯ ರಾಜ್ಯದಲ್ಲಿ ಶೀಘ್ರಗತಿಯಲ್ಲಿ ನಡೆಯುತ್ತಿದೆ. ಈದೊಂದು ಪರಿಹಾರದ ಮೊದಲ ಹೆಜ್ಜೆ. ಇಲ್ಲಿಯತನಕ ದೇಶದಲ್ಲಿ ಸಾವಯವ ಕೃಷಿಕರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣ ಬೆಳಕಿಗೆ ಬಂದಿಲ್ಲ.

ಕೃಷಿ ಒಂದು ಜೀವನ ಶೈಲಿಯಾಗಿರುವತನಕ ರೈತರು ಬಹುತೇಕ ಅವರ ಅಗತ್ಯಗಳನ್ನು ಅವರೇ ಪೂರೈಸಿಕೊಳ್ಳುತ್ತಿದ್ದರು. ಹೊರಗಿನಿಂದ ಕೊಳ್ಳುವುದನ್ನು ಕನಿಷ್ಟ ಮಟ್ಟದಲ್ಲಿ ಇಡುತ್ತಿದ್ದರು ಅಥವಾ ವಸ್ತುಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ಕೃಷಿ ವ್ಯಾಪಾರ ದಂಧೆಯಾಗಿ ಪರಿಣಮಿಸಿದ ಮೇಲೆ ಏಕಬೆಳೆ ಪದ್ದತಿ, ಬೀಜ, ಗೊಬ್ಬರ, ಔಷದಿಗಳನ್ನು ಕೊಂಡು ಕೊಳ್ಳುವ ಪವೃತ್ತಿ, ಹೆಚ್ಚು ನೀರು ಬಯಸುವ ಹೈಬ್ರಿಡ್ ತಳಿಗಳಿಗೆ ನೀರಿನ ಅನುಕೂಲತೆ ಕಲ್ಪಿಸುವುದಕ್ಕೆಲ್ಲ ಹೆಚ್ಚು ಹಣ ವ್ಯಯವಾಗುವುದರಿಂದ ಸಾಲದ

ಮೊರೆ ಹೋಗಬೇಕಾಯಿತು, ಖರ್ಚಿಗೂ ವರಮಾನಕ್ಕೂ ದೊಡ್ಡ ಕಂದರ ಉತ್ಪತ್ತಿಯಾಯಿತು. ರೈತರಿಗೆ ಬೇಕಿರುವ ಮೂಲ ವಸ್ತುಗಳ ಬೆಲೆ ಗಗನಕ್ಕೇರುತ್ತಿದ್ದರೂ ಅವರ ಕೃಷಿ ಉತ್ಪನ್ನಗಳಿಗೆ ಬಯಸಿದ ಬೆಲೆ ದೊರೆಯದಂತಾಯಿತು. ರೈತರು ಆತಾಷರಾಗಲು ದಾರಿಯಾಯಿತು. ಇದಕ್ಕೆ ಸಬ್ಸಿಡಿ ಸಾಲಮನ್ನಾ ಪರಿಹಾರವಲ್ಲ ಇವು ತಾತ್ಕಾಲಿಕ. ಸ್ವಸ್ಥಿರ ಕೃಷಿಗೆ ದಾರಿಯಲ್ಲ. ಕೃಷಿ ಕೇವಲ ಅಹಾರ ಉತ್ಪಾದಿಸುವ ವೃತ್ತಿಯಲ್ಲ ಅದು ಬಹು ಜನರ ಜೀವನಾಧಾರ. ಅದನ್ನು ಸುತ್ತುವರಿದ ಹೈನುಗಾರಿಕೆ ಅರಣ್ಯ ಮತ್ತಿತ್ತರ ಕೃಷಿ ಚಟುವಟಿಕೆಗಳು ಬದುಕಿಗೆ ದಾರಿ ಕಾಣಿಸುತ್ತವೆ. ಕೃಷಿ ಉತ್ಪನ್ನಗಳಿಗೆಲ್ಲ ಫಲವತ್ತಾದ ಮಣ್ಣೆ ಆಧಾರ, ಯಾವುದೇ ದೇಶದ ಸಂಪತ್ತು ಅಲ್ಲಿಯ ಮಣ್ಣಿನ ಫಲವತ್ತತೆಯಲ್ಲಿ ಅಡಕವಾಗಿರುತ್ತದೆ. ಅದು ಬರಿದಾದರೆ ದೇಶಕ್ಕೆ ಬಡತನ.

ಸ್ವಾತಂತ್ರ್ಯ ಬಂದ ನಂತರ ದೇಶಕ್ಕೆ ಅಹಾರ ಪೂರೈಸಲು ರೈತರನ್ನು ಪ್ರೋತ್ಸಾಹಿಸಿದ್ದಾಯಿತು. ದೇಶದ ಕಣಜವೇನೋ ತುಂಬಿತು ಆದರೆ ರೈತರ ಬವಣೆ ತಪ್ಪಲಿಲ್ಲ. ಪ್ರತಿ ಪಂಚವಾರ್ಷಿಕ ಯೋಜನೆಯಲ್ಲಿ ರೈತರ ಹೆಸರಿನಲ್ಲಿ ಲಕ್ಷಾಂತರ ಕೋಟಿ ರೂ ಕ್ರೋಡೀಕರಿಸಿದರೂ ರೈತರಿಗೆ ದೊರೆತದ್ದು ಅಲ್ಪ. ಅದರ ಲಾಭ ಪಡೆದವರು ಕೃಷಿ ಪರಿಕರಗಳನ್ನು ಉತ್ಪತ್ತಿ ಮಾಡುವ ಬೀಜ, ಗೊಬ್ಬರ, ಔಷದಿ, ಕೃಷಿ ಯಂತ್ರೋಪಕರಣಗಳ ಕಂಪನಿಯವರಿಗೆ. ರೈತರ ಜಮೀನಿನ ಫಲವತ್ತತೆಯ ಕಡೆಗೆ ಆಧ್ಯತೆ ಕೊಡಲಿಲ್ಲ. ಸ್ಥಳೀಯ ಸಂಪನ್ಮೂಲಗಳಿಂದ ಕೃಷಿ ಪರಿಕರಗಳನ್ನು ಕಡಿಮೆ ಖರ್ಚಿನಲ್ಲಿ ಒದಗಿಸಬಹುದಾದ ತಂತ್ರಜ್ಞಾನವಿದ್ದರೂ ದುಬಾರಿ ಬೆಲೆಯ ಪರಿಕರಗಳನ್ನು ಕೊಳ್ಳುವುದಕ್ಕೆ ಪ್ರೋತ್ಸಾಹಿಸುತ್ತಿರುವುದು ಸಾವಯವ ಕೃಷಿಗೆ ಆಡಚಣೆ. ಕೇವಲ ರಸಗೊಬ್ಬರ ಉಪಯೋಗಿಸುವಲ್ಲಿ ಸಾರಜನಕ ಮತ್ತು ರಂಜಕ ಮತ್ತು ಪೊಟ್ಯಾಷಗಳು ಲಭ್ಯವಾಗುವುದಲ್ಲದೆ ಬೆಳೆಗೆ ಬೇಕಿರುವ ೧೬ ಪೌಷ್ಟಿಕಾಂಷಗಳಲ್ಲಿ ಉಳಿದವನ್ನೆಲ್ಲ ಭೂಮಿಯಿಂದ ಹೀರಿ ಬರಡಾಗುತ್ತಿದೆ. ೫೦ ರ ದಶಕದಲ್ಲಿ ಈ ದೇಶದಲ್ಲಿ ಕೇವಲ ಸಾರಜನಕದ ಕೊರತೆಯಿತ್ತು. ಈಗ ಸುಮಾರು ಹತ್ತು ಪೋಷಕಾಂಶಗಳ ಕೊರತೆ ಕಂಡು ಬಂದಿದೆ.

೬೦ ವರ್ಷಗಳಲ್ಲಿ ಹೇಗೋ ಅಹಾರದಲ್ಲಿ ಸ್ವಾವಲಂಬಿಗಳಾಗಿದ್ದೇವೆ ಆದರೆ ಪೌಷ್ಟಿಕಾಂಷದ ಕೊರತೆಯಿಂದ ದಿನೇ ದಿನೇ ಕ್ಷೀಣಿಸುತ್ತಿದ್ದೇವೆ. ಈ ಕೊರತೆಯಿಂದ ಪ್ರಪಂಚದಲ್ಲಿ ನಾವು ೧೨೮ನೇ ಸ್ಥಾನದಲ್ಲಿದ್ದೇವೆ. ಹಲವಾರು ಆಫ್ರಿಕಾ ದೇಶದವರಿಗಿಂತಲೂ ಕೆಳ ಮಟ್ಟದಲ್ಲಿದ್ದೇವೆ. ಕಾರಣ ನಾವು ಬೆಳೆಯುವ ಅಹಾರ ಮತ್ತು ಮೇವು ಸತ್ವಹೀನ, ಭೂಮಿಯಲ್ಲಿ ಬೋಗವಿಲ್ಲದ್ದು. ಬೋಗ

ವೃದ್ಧಿಯಾಗಬೇಕಿದ್ದರೆ ಮಣ್ಣಿನಲ್ಲಿ ಸಾವಯವ ಅಂಶ ಹೆಚ್ಚಿದ್ದು, ಕನಿಷ್ಟ ತೇವಾಂಶ ಇದ್ದು ಏಣಿಕೆಗೆ ಎಟುಕದಷ್ಟು ಜೀವಾಣುಗಳು ವೃದ್ದಿಸಿ ಸಾವಯವ ವಸ್ತುಗಳನ್ನು ತಿಂದು ಅರಗಿಸಿ ತಾವು ಸತ್ತು ಹ್ಯೂಮಸ್ ಉತ್ಪತ್ತಿ ಮಾಡುತ್ತವೆ. ಇಂತಹ ಮಣ್ಣನ್ನು ಜೀವಂತ ಮಣ್ಣೆನ್ನುವರು. ಭೂಮಿಯ ಬೋಗ (ಹ್ಯೂಮಸ್) ಜನ ಜಾನುವಾರುಗಳ ಪೌಷ್ಟಿಕಾಂಶದ ಗಣಿ ಹಾಗೂ ಉತ್ಪತ್ತಿ ಮತ್ತು ಉತ್ಪಾದಕತೆಗೆ ಮೂಲ. ರೈತರ ಸಂಕಷ್ಟಗಳಿಗೆ ಪರಿಹಾರ ಸಾಲ ಮಾಡದೆ ಕೃಷಿ ಮಾಡಿ ಸ್ವಾವಲಂಬನೆಯತ್ತ ಸಾಗುವುದು.

ರೈತರ ಸಂಕಷಟ್ಟಕ್ಕೆ ಮತ್ತೊಂದು ಪರಿಹಾರದ ಮಾರ್ಗವೆಂದರೆ ಅವರ ಕನಿಷ್ಟ ಅಗತ್ಯತೆಗಳನ್ನು ಅವರೇ ಬೆಳೆದುಕೊಳ್ಳುವಂತಿರಬೇಕು. ಏಕಬೆಳೆ ಪದ್ದತಿ ರೈತನಿಗೂ ಮತ್ತು ಭೂಮಿಗೂ ಹಾನಿಕಾರಕ. ಹೈನುಗಾರಿಕೆಯಿಲ್ಲದ ಬೇಸಾಯ ಬರಡು. ಮೇವು ಉರುವಲು ತರಕಾರಿ ಹಣ್ಣು, ಮಾಂಸ, ಮೊಟ್ಟೆ ಮತ್ತು ಮೀನು ಸಾಧ್ಯವಾದಲೆಲ್ಲ ಅಗತ್ಯತಗೆ ಅಗುವಷ್ಟನ್ನು ಉತ್ಪತ್ತಿ ಮಾಡುವಂತಿರಬೇಕು. ರೈತನ ಖರ್ಚು, ವೆಚ್ಚ, ಅಹಾರ ವಿಹಾರ ಅವನ ಉತ್ಪತ್ತಿಗೆ ಅನುಗುಣವಾಗಿರಬೇಕು. ರೈತರ ಸಂಕಷ್ಟಗಳಿಗೆ ಪರಿಹಾರ ಈ ಮಾರ್ಗ ಸೂಕ್ತ.

Sentm 2/9/0

References

Aslog Malmberg, SheSimkin and Keith Hawton (1999). Suicide in Farmers. *British Journal of Psychiatry,* **175**: 103-105.

Assadi M. (1998). Farmers' suicides: Signs of distress in Rural Economy. *Economic and Political Weekly* **33**(14) p. 747

Cheng, A.T. and Mann. A.T. (1995). Mental Illness and Suicide: a case-control study in East Taiwan. *Archives of General Psychiatry,* **52:** 594-603.

Deshpande R.S. 2002; Suicides by Farmers in Karnataka, Agrarian Distress and Possible alleviatory Step: Economic and political Weekly Vol 37 No 26 29th June 2002.

Durkheim, E. (1952), *Suicide: A study in Sociology,* Translated by Spaulding, J.A. and Simpson, G. London : Routledge and Kegan Paul Ltd.

Eddleston, M., Sheriff, M.H.R. and Hawton, K. (1998). "Deliberate Self-harm in Sri Lanka. An overlooked tragedy in the Developing World". *British Medical Journal,* **317:** 133-135.

Gunderson, P. Donner, D., Nashold, R. et al. (1993) : "The Epidemiology of Suicide among Farmer Residents in North Eastern State 1980-1988". *American Journal of Preventive Medicine.* **9**: 26-32.

Gururaj, G. and Issac, M.K. (2001,a) : Suicides Beyond Numbers : Epidemiology of suicides in Bangalore., NIMHANS Pub. No. **43 & 44,** National Institute of Mental Health and Neurosciences, Bangalore

Gururaj, G., Mohan K.Issac and Srinivasan (2001,b) : "Suicide Trends in Karnataka". In Proceedings of the Seminar on Farmers' Distress held on 22nd September 2001 at IAT, Bangalore, organised by Expert committee for Study of Farmers' Suicides and Institution of Agricultural Technologists, Bangalore

Habil, M.H. Ganeswaran, T. and Agres, L.S. (1992). Attempted Suicides in Kuala Lampur. *Asia and Pacific Journal of Public Health,* **6**: 5-7.

Institute for Development and Communication, (1998) Monograph Series V. Chandigarh, India (The Punjab State Co-op Apex Bank Ltd., Dept. of Cooperation, Govt.of Punjab *Suicides in Rural Punjab.*

Javed, M.A. (1996). Suicidal symptoms in depressed Pakistani Patients. *Journal of the Pakistan Medical Association*, **46**: 69-70

Keith Hawton, Sue Simkin, Aslog Malmberg, Joan Fagg and Louise Harris (1998). *Suicide and Stress in Farmers*. Stationery Office Books. ISBN. 0-11-322-172 X.

Kelly S., Charlton, J and Jenkins, R. (1995). Suicide deaths in England and Wales 1982-92. *The Contribution of occupational and Geography Population Trends*: **80:** 16-25

Khan, M.M. and Reza, H. (1998). Gender differences in non-fatal suicidal behaviour in Pakistan. Significance of socio-cultural differences. *Suicide and Life-Threatening behaviour*, 28: 62-68.

Madhawan, P.K.S., Samiksha Thakur, Ramana, P.V. (1998) : Farmers' Suicides in Andhra Pradesh. Development Research. Advisory Group 8 of 'AWARE', Hyderabad.

Report of the Joint House Committee of Karnataka on Crop loss and Farmers' suicide in Karnataka (1999). Karnataka Vidhana Sabha Sachivalaya, Vidhana Soudha, Bangalore-1

Shetty, P.K. (1999). *Ecological Crisis and Agrarian Distress in Bidar*. NIAS Report R6-99, National Institute of Advances Studies, Indian Institute of Science Campus, Bangalore-12

State Crime Records Bureau, Government of Karnataka. Profession Profile of suicide victims (1996-2000),

University of Agricultural Sciences (2001). *Report on the Causes of farmers committing suicide in the State* Submitted by the Department of Agricultural Marketing &Cooperation, University of Agricultural Sciences, Bangalore-560065

Vasavi, A.R. (1999). Agrarian Distress in Bidar: Market, State and Suicides, *Economic and Political Weekly*, April 7th.

Yeeresh, G.K., et al (2002) Farmers' Suicides in Karnataka: A scientific analysis, Report of the Expert committee, GCK. Bangalore